ಉಳಿದುಕೊಂಡವರಾದರೆ ಅವರ ಜೊತೆ ಪಂಕ್ತಿಯಲ್ಲಿ ಕೂತು ಉಂಡವನಲ್ಲ. ಈಗ ಅದೇ ಬಡಬ್ರಾಹ್ಮಣ ಅದೆಷ್ಟು ಹಿತವಾಗಿ ಕಾಣುತ್ತಿದ್ದಾರೆಂದರೆ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನಂತೆ. ಭವಾನಿ ತುದಿ ಬೆರಳುಗಳಲ್ಲಿ ಹಿಡಿದು ತಂದಿಟ್ಟ ಕಾಫಿಯ ಲೋಟ ಕೈಗೆತ್ತಿಕೊಂಡು ಕಾಫಿ ಕುಡಿದು, ಕವಳದ ತಟ್ಟೆ ಮುಂದಕ್ಕೆಳೆದುಕೊಂಡು, ಮತ್ತೊಂದು ಮಾತು ಒಗಾಯಿಸಿದರು ಐತಾಳರು,

‘ನಿಮ್ಹತ್ರ ಸತ್ಯ ಹೇಳ್ತೀನಿ ರಾಧಮ್ಮ, ಮನೆ ಅಳಿಯ ಆದ್ರೆ ಲಾಯ್ಕಿತ್ತು ಅಂತ ಅವ್ರಿಗೆ ಆಸೆ ಇದ್ದಿದ್ದು ಹೌದು..’ ರಾಮಚಂದ್ರನ ಎದೆ ಧಸಕ್ಕೆಂದಂತೆ ಅಮ್ಮನಿಗೂ ಆಗಿರಬೇಕು. ಮುಖ ಚೂರು ಕಪ್ಪಿಟ್ಟಿತ್ತು.

‘ಅದ್ಹೆಂಗಾಗುತ್ತೆ? ಅತ್ತೆ, ಮಾವನ ಕಾಲ ಬುಡಕ್ಕೆ ಹೋಗಿ ಹೊಕ್ಕಂಡ್ರೆ ಏನಂತಾರೆ ಜನ? ಮದುವೆ ಮಾಡ್ಕಂಡ ಹುಡುಗಿ ಗಂಡನ ಮನೆಗೆ ಬಂದು ಸಂಸಾರ ಮಾಡೋದು ಲೋಕಾರೂಢಿ..’ ಅಂದಿದ್ದಳು ಅಮ್ಮ.

‘ತಡೀರಿ, ತಡೀರಿ. ಅವ್ರು ಅಷ್ಟೆಲ್ಲಾ ತಿಳಿವಳಿಕೆ ಇಲ್ದಿರೋ ಜನ ಅಂತ ಲೆಕ್ಕ ಹಾಕ್ಬಿಡ್ಬೇಡಿ. ಇರೋ ಒಂದು ಹುಡುಗೀನ ಯಾರೋ ಅಬ್ಬೇಪಾರಿಗೆ ಕೊಟ್ಟು ಮದುವೆ ಮಾಡೋಕೆ ಅವರಿಗೆ ಹುಚ್ಚಾ, ಮರುಳಾ? ದುಡ್ಡುಕಾಸು ಅಂತ ತಮ್ಮ ಮಟ್ಟಕ್ಕೆ ಸರಿಯಾಗಿದ್ದೋರು ಸಿಗ್ಬೇಕು ಅಂದ್ರೆ ಅವನು ಆ ಮನೆಗೆ ಬಂದಿರೋ ಮಾತು ಸುಳ್ಳೇಸುಳ್ಳು. ಆಸ್ತಿ, ಮನೆ ಬಿಟ್ಟು ಅಲ್ಲಿಗೆ ಹೋಗಿರೋಕೆ ಯಾರು ಒಪ್ಗಂತಾರೆ?’

ಸಮ ಅನ್ನುವಂತೆ ತಲೆ ಕುಣಿಸಿದಳು ಅಮ್ಮ.

‘ನೌಕರೀಲಿರೋರು ಬ್ಯಾಡ ಅಂತ ಬಿಟ್ಟು ಹೊಡೆದಿದ್ದಕ್ಕೂ ಕಾರಣ ಉಂಟು..’

‘ಯಾಕಂತೆ?’

‘ಏನೋ ಅನಿವಾರ್ಯ ಅಂದ್ರೆ ಬಿಟ್ಟಿದ್ದು ಬಿಟ್ಟ ಹಾಗೆ ಓಡಿ ಬರೋಕೆ ಅವನಿಗೆ ಸ್ವಾತಂತ್ರ್ಯ ಇರುತ್ತಾ? ರಜಗಿಜ ಅಂತ ನೂರಾ ಎಂಟು ತಾಪತ್ರಯ. ಜಮೀನು, ಮನೆ ಅಂತ ಬೇಸಾಯದ ಅನುಭವ ಇರೋನಾದ್ರೆ ಒಳ್ಳೇದು ಅಂತ ಅವರ ಅಭಿಪ್ರಾಯ..’

‘ಹೂಂ ಮತ್ತೆ..’

‘ಸ್ವತಂತ್ರವಾಗಿರೋ ಹುಡುಗ ಆದ್ರೆ ಕಷ್ಟ, ಸುಖಕ್ಕೆ ತಕ್ಷಣ ಓಡಿ ಬರ್ತಾನೆ..’

‘ಬರದೆ ಮತ್ತೆ? ಅವನಿಗೂ ಇರುತ್ತಲ್ಲ ಜವಾಬ್ದಾರಿ?’

‘ಮತ್ತೆಂತಕ್ಕಲ್ಲ ಇಷ್ಟುದ್ದ ಪುರಾಣ ಹೇಳ್ತಿರೋದು. ಸಂದರ್ಭ ಅಂದ್ರೆ ನಿಮ್ಮ ಹುಡುಗ ಹೆತ್ತ ಅಪ್ಪ, ಅಮ್ಮನ ಹಾಗೆ ಅತ್ತೆ, ಮಾವನ್ನೂ ನೋಡ್ಕಂಬೇಕಾಗುತ್ತೆ..’

‘ಅಯ್ಯೋ, ಇದನ್ನೆಲ್ಲಾ ಬಾಯ್ಬಿಟ್ಟು ಹೇಳ್ಬೇಕಾ ಐತಾಳ್ರೇ? ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಅನ್ನೋದೆಲ್ಲಾ ಹೇಳಿಕೆ ಮಾತು. ಎರಡು ಮನೆಯೋರೂ ಹೊಂದಿಕೊಂಡು ಸಂತೋಷವಾಗಿರ್ಬೇಕಾದ್ದು ಮುಖ್ಯ..’

‘ಇಷ್ಟು ಮಾತು ನಿಮ್ಮ ಕಿವೀ ಮೇಲೆ ಹಾಕಿರಿ ಅಂತ ಶೀನಪ್ಪಯ್ಯ ಹೇಳಿ ಕಳ್ಸಿದಾರೆ. ನನ್ನ ಜವಾಬ್ದಾರಿ ಇಲ್ಲಿಗೆ ಮುಗೀತು. ನಿಮಗೆ ಈ ಸಂಬಂಧ ಒಪ್ಪಿಗೆ ಅಂತಾದ್ರೆ ಇನ್ನು ನೀವ್ ನೀವು ಅದೇನು ಮಾತಾಡ್ತೀರೋ, ತೀರ್ಮಾನ ಮಾಡ್ಕಂತೀರೋ ನಿಮಗೆ ಬಿಟ್ಟಿದ್ದು..’

ಐತಾಳರು ಅಡಿಕೆ ಕತ್ತರಿಯಿಂದ ಗೋಟಡಿಕೆ ಹೋಳನ್ನು ಕಟುಂ ಎಂದು ಕತ್ತರಿಸಿ ಬಾಯಿಗೆ ಎಸೆದುಕೊಂಡರು. ಎಡ ಅಂಗೈ ಕುಳಿಯಲ್ಲಿ ತಂಬಾಕಿನ ತುಂಡಿಗೆ ಸುಣ್ಣ ಸೇರಿಸಿ ಮಿದ್ದು ಹದ ಮಾಡತೊಡಗಿದರು. ಇಲ್ಲಿಯವರೆಗೆ ಕೈ ಹಿಡಿದು ಮುನ್ನಡೆಸಿದ ಐತಾಳರು ಜಾರಿಕೊಳ್ಳುವ ಮಾತಾಡಿದ್ದು ಅಮ್ಮನಿಗೆ ಹಿತವಾಗಲಿಲ್ಲ.

‘ನೀವೇ ಮುಂದೆ ನಿಂತು ಈ ಮದುವೆ ನಡೆಸಿಕೊಡ್ಬೇಕು. ದೇವರು ಕಳಿಸಿದ ಹಾಗೆ ಸಹಾಯಕ್ಕೆ ಬಂದಿದೀರಿ. ದಡ ಮುಟ್ಟಿಸಿಬಿಡಿ..’ ಅಮ್ಮ ಒತ್ತಾಯದ ಧಾಟಿಯಲ್ಲಿ ಹೇಳಿ, ಐತಾಳರು ಬಾಯಿ ಬಿಟ್ಟು ಮಾತಾಡಲಾಗದೆ ತಲೆ ಕುಣಿಸಿ, ಏಕಾಂತದಲ್ಲಿ ತಮ್ಮನನ್ನು ಕೇಳಿದ್ದ ರಘುರಾಮ,

‘ಒಂದು ಪಕ್ಷ ನೀನು ಅಲ್ಲೇ ಬಂದಿರ್ಬೇಕು ಅಂತ ಒತ್ತಾಯ ಮಾಡಿದ್ರೆ ಏನೋ ಮಾಡ್ತಿದ್ದಿ? ಗಂಟು ಮೂಟೆ ಕಟ್ಗಂಡು ಜೈ ಅಂತ ಹೊರಟುಬಿಡ್ತಿದ್ದ್ಯಾ?’

ಸಾಧ್ಯವಿಲ್ಲ.. ಅನ್ನುವಂತೆ ಗೋಣಾಡಿಸಿದ್ದ ರಾಮಚಂದ್ರ. ಹೆಣ್ಣಿನ ಮೋಹ, ಮಾಯೆಯ ಮುಸುಕಿನಲ್ಲಿ ಸಾಧ್ಯವಿಲ್ಲವಾಗಿದ್ದು ಸಾಧ್ಯವಾಗುತ್ತಿತ್ತೇನೋ. ಆದರೆ ಅಂತಾ ಸಂದರ್ಭ ಸೃಷ್ಟಿಯಾಗಿರಲಿಲ್ಲ. ಕನಸಿನ ಕುದುರೆಯೇರಿ ಸಂಚಾರ ಹೊರಡಲು ಮತ್ಯಾವ ಅಡ್ಡಿ ಆತಂಕಗಳೂ ಇರಲಿಲ್ಲ.

ಮದುವೆ ಗೊತ್ತಾದ ಎಲ್ಲಾ ಗಂಡುಗಳಂತೆ ಅವನೂ ಸಂಭ್ರಮೋಲ್ಲಾಸಗಳಿಂದ ಪುಟಿಯತೊಡಗಿದ.

* * *

## ರಾಮಚಂದ್ರ-ನಾಗಶ್ರೀ ಮದುವೆ

ಹೆಣ್ಣಿನವರ ಯೋಗ್ಯತೆಗೆ ತಕ್ಕಂತೆ ಜಬರ್ದಸ್ತಾಗಿ ನಡೆಯಿತು ಮದುವೆ. ಸೂರೆ ಹೋಗುವಷ್ಟು ಶ್ರೀಮಂತಿಕೆ ಇಲ್ಲದಿದ್ದರೂ ಕೈ ಬಿಚ್ಚಿ ಖರ್ಚು ಮಾಡುವಷ್ಟು ಸಿರಿವಂತಿಕೆ ಇದ್ದ ಜನ. ಸಣ್ಣ ಸಂಸಾರ. ಹಾಗಾಗಿ ಕೈ ಹಿಡಿತ ಮಾಡದಿದ್ದರೂ ವರ್ಷದ ಕೊನೆಯಲ್ಲಿ ತಕ್ಕಷ್ಟು ಹಣ ಬ್ಯಾಂಕ್ ಖಾತೆಯ ಠೇವಣಿಯಲ್ಲಿ ಜಮಾ ಆಗುತ್ತಿತ್ತು. ಶೀನಪ್ಪಯ್ಯ ಎಲ್ಲೂ ಕೈ ಹಿಡಿತ ಮಾಡದೆ ಮನೆ ಬಾಗಿಲಲ್ಲಿ ಮದುವೆ ಮಾಡಿಕೊಟ್ಟರು. ಪಂಚಭಕ್ಷ ಪರಮಾನ್ನದ ಊಟ ಉಂಡು ಬಂದ ಜನ ವಧೂವರರನ್ನು ಬಾಯ್ತುಂಬಾ ಹರಸಿ ಹೋದರು. ರಾಮಚಂದ್ರನ ಅಮ್ಮ ರಾಧಮ್ಮ ಪರಮ ಸಂತುಷ್ಟೆಯಾಗಿದ್ದರು. ಹಿರಿ ಮಗನ ಮದುವೆಯಲ್ಲಿ ಹುಬ್ಬಿನ ಗಂಟು ಬಿಚ್ಚಲು ಒಲ್ಲೆ ಅನ್ನುವಂತಿದ್ದವರು ಕಿರಿ ಮಗನ ಮದುವೆಯಲ್ಲಿ ತೆರೆದ ಬಾಯಿ ಮುಚ್ಚಲು ಮರೆತರು. ಅವರು ಕೇಳದೆಯೇ ರಾಜೋಪಚಾರ. ಹುಡುಗನ ಪೈಕಿಯ ಹತ್ತಿರದ ಬಂಧುಗಳಿಗೆ ಕಡ್ಡಿ ಅಂಚಿನ ರೇಷ್ಮೆ ಸೀರೆ. ರಾಧಮ್ಮನಿಗೆ, ಅತ್ತಿಗೆ ಭವಾನಿಗೆ ಬುಟ್ಟಾ ಹೂವಿನ ಸೀರೆಗಳು. ನಿಲುವಾಭರಣಗಳಿಂದ ಸಿಂಗಾರಗೊಂಡು ಕಂಗೊಳಿಸುತ್ತಿದ್ದ ನಾಗಶ್ರೀಯನ್ನು ಧಾರೆ ಎರೆಸಿಕೊಳ್ಳಲು ರಾಮಚಂದ್ರನ ಹೆತ್ತವರ ಸ್ಥಾನದಲ್ಲಿ ಹಸೆಮಣೆ ಮೇಲೆ ಕೂತಿದ್ದ ಭವಾನಿಯ ಮುಖ ಪೆಚ್ಚುಪೆಚ್ಚಾಗಿತ್ತು. ಗಂಡನ ಮನೆಯಲ್ಲಿ ಹಾಕಿದ ಚಿನ್ನದಲ್ಲಿ ಸುತ್ತಿಸಿದ ಕರಿಮಣಿ ಸರ ಬಿಟ್ಟರೆ ಮೈಮೇಲೆ ಬೇರೆ ನಗ ಇಲ್ಲ. ತೀರಾ ಇಲ್ಲ ಅನ್ನದ ಹಾಗೆ ಅವಳ ತೌರುಮನೆಯಲ್ಲಿ ಬಿಳಿ ಹರಳಿನ ಕಣ್ಕಟ್ಟಿನ ಬೆಂಡೋಲೆ, ಜೋರಾಗಿ ಗಾಳಿ ಬೀಸಿದರೆ ಹಾರಿ ಹೋಗುತ್ತೆ ಅನ್ನುವಂತಿದ್ದ ಒಂದು ಉಂಗುರ ಹಾಕಿದ್ದರು. ವಾರಗಿತ್ತಿ ಗಂಡನ ಮನೆಯ ಹೊಸಿಲು ದಾಟಿ ಒಳ ಬಂದ ಮೇಲೆ ಆ ಮನೆಯಲ್ಲಿ ತನ್ನ ಸ್ಥಾನ ಹೇಗಿರುತ್ತದೆ ಎಂದು ಚಿಂತೆ ಹತ್ತಿಕೊಂಡಿತ್ತಾ ಭವಾನಿಗೆ? ಇದ್ದಿರಬಹುದು. ಮದುವೆ ಮುಗಿದು, ಮರುದಿನದ ನಾಗೋಲಿ ಶಾಸ್ತ್ರ ಮುಗಿದು, ಹೆಣ್ಣೊಪ್ಪಿಸುವ ಹೊತ್ತಿಗೆ ಒಂದು ಕಹಿ ಘಟನೆ ನಡೆಯಿತು. ಮಗಳ ಮದುವೆ ಅಂದರೆ ಅವಳನ್ನು ನೇಣಿಗೆ ಹಾಕುತ್ತಿದ್ದೇವೆ ಅನ್ನುವಂತೆ ನಾಗಶ್ರೀಯ ಅಮ್ಮ ಸರೋಜಮ್ಮನ ಕಣ್ಣೀರಧಾರೆ ನಿರಂತರವಾಗಿ ಹರಿಯುತ್ತಲೇ ಇತ್ತು, ಬೀಗರು ಬಂದಿಳಿದ ದಿನದಿಂದ. ಧಾರೆಯ ಹೊತ್ತಿಗೆ ಈ ದುಃಖ ಪರಾಕಾಷ್ಠೆಗೇರಿತ್ತು. ಒಬ್ಬಳೇ ಮಗಳು ಅಂದ ಮೇಲೆ ಅಗಲಿಕೆಯ ದುಃಖ, ಆತಂಕ ಸಹಜ.

‘ಕಣ್ಣೀರು ಹಾಕ್ಕಂತಾ ಮಗಳ ಮದುವೆ ಮಾಡ್ಬೇಡಿ. ಅವಳನ್ನ ಅಂಗೈ ಅರಗಿಣಿ ಥರ ನೋಡ್ಕಳ್ಳೋ ಜವಾಬ್ದಾರಿ ನಮ್ದು. ಯಾವಾಗ ಬೇಕು ಅಂದ್ರೆ ಆವಾಗ ಬಂದು ನೋಡ್ಕಂಡ್ಹೋಗಿ. ಬ್ಯಾಡ, ಅವರೇ ಬಂದು ಹೋಗ್ತಿರ್ತಾರಪ್ಪಾ..’ ರಾಧಮ್ಮ ಬೀಗಿತ್ತಿಯನ್ನು ಸಂತೈಸುವ ಪ್ರಯತ್ನ ಮಾಡಿ ಸೋತಿದ್ದರು. ಅತ್ತೆಮ್ಮನಾಗುವವರ ಶೋಕ ಕಂಡು ಮೊದಮೊದಲು ಅಯ್ಯೋ.. ಅನಿಸಿತ್ತು ರಾಮಚಂದ್ರನಿಗೆ. ಆದರೆ ಯಾವುದೂ ಅತಿಯಾದರೆ ಕರ್ಕಶ ಅನ್ನಿಸಿ ಬಿಡುವಂತೆ ಅವನಿಗೂ ಅನ್ನಿಸತೊಡಗಿತ್ತು.

ನಾಗಶ್ರೀ ವಾಸಿ. ಅಮ್ಮನ ಕಣ್ಣೀರು ಕಂಡರೂ ಕಣ್ಣಲ್ಲಿ ನೀರು ವಸರದ ಗಟ್ಟಿಗಿತ್ತಿ. ‘ಸುಮ್ನಿರೇ.., ಸುಮ್ನಿರೇ..’ ಎಂದು ಅವಳೇ ಒಂದೆರಡು ಸಲ ಅಮ್ಮನನ್ನು ಎಚ್ಚರಿಸಿದ್ದನ್ನು ಕೇಳಿಸಿಕೊಂಡ ರಾಮಚಂದ್ರನಿಗೆ ಪರವಾಗಿಲ್ಲ ತನ್ನ ಹುಡುಗಿ ಅನ್ನಿಸಿತ್ತು. ಆದರೆ ಹೆಣ್ಣೊಪ್ಪಿಸುವ ಹೊತ್ತಿಗೆ ನಡೆದ ಘಟನೆ ನಾಗಶ್ರೀಯ ಸ್ಥೈರ್ಯವನ್ನು ಕಸಿದುಬಿಟ್ಟಿತು. ಸರೋಜಮ್ಮ ಅದೊಂಥರಾ ವಿಕಾರ ದನಿಯಲ್ಲಿ ಕೂಗಿ ಪ್ರಜ್ಞೆ ತಪ್ಪಿ ಬಿದ್ದು ಬಿಟ್ಟರು. ಪಕ್ಕದಲ್ಲಿದ್ದವರು ಆಧರಿಸಿ ಹಿಡಿಯದಿದ್ದರೆ ನೆಲಕ್ಕೆ ಜಪ್ಪಿ ತಲೆ ಒಡೆದಿದ್ದರೂ ಆಶ್ಚರ್ಯವಿರುತ್ತಿರಲಿಲ್ಲ. ಆಮೇಲೆ ಅದೊಂದು ಅಪಶಕುನ ಎನ್ನುವ ಭಾವ ನೆರೆದವರ ಮನಸ್ಸಿನಲ್ಲಿ ಗಟ್ಟಿಯಾಗಿ ಕೂತು ಬಿಡುತ್ತಿತ್ತು. ಅಮ್ಮ ಮೈಮೇಲೆ ಎಚ್ಚರವಿಲ್ಲದೆ ಕುಸಿದಿದ್ದನ್ನು ಕಂಡು ತಲ್ಲಣಿಸಿದಳು ನಾಗಶ್ರೀ. ‘ಅಮ್ಮಾ.., ಅಮ್ಮಾ..’ ಎನ್ನುತ್ತಾ ಅವರ ಕೈ ಹಿಡಿದು ಹಲುಬಿದಳು. ಕಣ್ಣ ನೀರಿನಿಂದ ಕಣ್ಕಪ್ಪು ಕರಗಿ ಕೆನ್ನೆಯ ಮೇಲಿಳಿದು ಮುಖ ಅಂದಗೆಟ್ಟಿತು.

(ಸಶೇಷ)